ಹಾಕುವೆಯಂತೆ" ಅಂತಂದು ಕಮಲಜ್ಜಿ ವಿಶೇಷವಾಗಿ ನಕ್ಕಳು.

"ಹೌದಾ? ಆಯ್ತು ಕಮಲಜ್ಜಿ, ಹಾಗೇ ಮಾಡ್ತೇನೆ" ಎಂದ ಅಂತು ಹಟ ಹಿಡಿಯದೆ. ಅವನಿಗೆ ಯಾರೂ ತನ್ನನ್ನು ನೋಡಿ ನಗೋದು ಬೇಕಿರಲಿಲ್ಲ.

"ಒಂದ್ ಕೆಲ್ಸಾ ಮಾಡು, ಈ ವಾಚನ್ನು ನನ್ನತ್ರ ಕೊಡು, ನಾನು ಜಾಗ್ರತೆಯಾಗಿ ಇಡ್ತೇನೆ. ನಿಂಗೆ ಆಟ ಆಡ್ಲಿಕ್ಕೆ ಬೇಕಾದ್ರೆ ಇಲ್ಲಿಗೆ ಬಾ. ನೀನ್ ದೊಡ್ಡೋನಾದ್ ಮೇಲೆ ನಾನೇ ನಿಂಗೆ ಕೊಡ್ತೇನೆ ಆಯ್ತಾ?" ಅಂದಳು ಕಮಲಜ್ಜಿ.

ಪಟ್ ಅಂತ ಬೇರೇನೂ ಯೋಚಿಸದೇ "ಆಯ್ತಜ್ಜಿ ಇಲ್ಲೇ ಇರ್ಲಿ. ಮನೇಲಿ ಕೇಳಿದ್ರೆ ಏನಾದ್ರೂ ಹೇಳ್ತೇನೆ" ಎಂದು ಅಂತು ನಸು ನಕ್ಕ.

ತಾನೇ ಹೂಡಿದ ಉಪಾಯ ಫಲಿಸಿದ್ದಕ್ಕೆ ಕಮಲಜ್ಜಿಗೆ ಖುಷಿಯೇ ಆಯಿತು. ತನ್ನವರ ಕೈಗಡಿಯಾರವನ್ನು ಅವನಿಂದ ತಗೊಂಡು ಒಳಕ್ಕೆ ಹೋಗಿ ಮರದ ಕಪಾಟಿನಲ್ಲಿರುವ ಸಣ್ಣ ಪೆಟ್ಟಿಗೆಯಲ್ಲಿ ಬೆಚ್ಚಗೇ ಜೋಪಾನವಾಗಿರಿಸಿದಳು.

ಮತ್ತೆ ಅವಳು ಜಗುಲಿ ಹೊಕ್ಕಾಗ "ಕಮ್ಲಜ್ಜಿ ಹೊತ್ತಾಯ್ತು ನಾಳೆ ಸಿಗುವ" ಎಂದ ಅಂತು, ಕುಂಡೆಗೆ ಕಾಲು ಕೊಟ್ಟು ಸಣ್ಣಗಿನ ಮಳೆಯಲ್ಲೇ ಮನೆ ಕಡೆ ಓಡಿದ. "ಅಂತು, ನಾಳೆ ಬೇಗ ಬಾ, ನಿಂಗೆ ಹೊಸ ಕತೆ ಹೇಳ್ತೇನೆ. ಕೊಬ್ಬರಿ ಮಿಠಾಯಿ ಕೊಡ್ತೇನೆ ನಾಳೆ" ಎಂದು ತನ್ನಿಂದಾದಷ್ಟು ಗಟ್ಟಿಯಾಗಿ ಕೂಗಿದಳು, ಮಳೆಯಲ್ಲೇ ಅವಳ ಮಾತು ತಂಪಾಗಿ ಕೇಳಿಸಿ "ಹೂಂ. ಆಯ್ತಜ್ಜಿ" ಎಂದು ಹೇಳುತ್ತಲೇ ಅಂತು ಮಳೆಯಲ್ಲಿ ಕರಗಿಹೋದ. ದೂರದಲ್ಲಿ ಸಾಗುವ ಅಂತುವನ್ನು, ಜಿಟಿ ಜಿಟಿ ಎಂದು ಒಂದೇ ಸಮನೇ ಹಸಿರಲ್ಲಿ ಹೊಯ್ಯುವ ಮಳೆಯನ್ನು ಬಹಳ ಹೊತ್ತು ನೋಡಿದ ಕಮಲಜ್ಜಿ, ಮತ್ತೆ ತನ್ನವರ ಕೈಗಡಿಯಾರ ನೋಡುವ ಕಾತರದಿಂದ ಒಳಕ್ಕೆ ಓಡಿದಳು. ಹೊರಗೆ ಮಳೆ ಜೋರಾಗಿದ್ದರಿಂದ ಕಮಲಜ್ಜಿಗೆ ನೆನಪುಗಳೂ ಜೋರಾದವು. ಮಳೆಯೂ ಇನ್ನೂ ಜೋರಾಗಲಿ ಎಂದವಳು ಆಶೆಪಡುತ್ತಿದ್ದಾಗ ಇಡೀ ನೇರಳೆಪುರದ ಕಾಡು ಮಳೆಯ ಸದ್ದಲ್ಲೇ ಮುಳುಗಿಹೋಯಿತು.

## ಪ್ರಸಾದ್ ಶೆಣೈ ಆರ್.ಕೆ.

ಉಡುಪಿ ಜಿಲ್ಲೆಯ ಕಾರ್ಕಳ ಹುಟ್ಟೂರು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರ. ಸದ್ಯ ಕಾರ್ಕಳದಲ್ಲಿ ಉಪನ್ಯಾಸಕ. ಪತ್ರಿಕಾ ವೃತ್ತಿಯಲ್ಲಿ ಒಂದಷ್ಟು ಅನುಭವ. ಬರವಣಿಗೆ, ಫೋಟೊಗ್ರಫಿ, ಪಕ್ಷಿ ವೀಕ್ಷಣೆ, ಚಾರಣ ಅವರ ನೆಚ್ಚಿನ ಹವ್ಯಾಸ. ವಿವಿಧ ಪತ್ರಿಕೆಗಳಲ್ಲಿ ಕತೆ, ನುಡಿಚಿತ್ರಗಳು ಪ್ರಕಟವಾಗಿವೆ. 2019ರ ಕನ್ನಡ ಕ್ರಿಯಾಶೀಲ ಬರವಣಿಗೆಯಲ್ಲಿ ಟೋಟೋ ಫಂಡ್ಸ್ ಆಫ್ ಆರ್ಟ್ ನೀಡುವ ಟೋಟೋ ಪುರಸ್ಕಾರ ಲಭಿಸಿದೆ. 2014ರ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯ ವಿದ್ಯಾರ್ಥಿ ವಿಭಾಗದ ಬಹುಮಾನ ಬಂದಿದೆ. 'ಲೂಲು ಟ್ರಾವೆಲ್ಸ್'– ಅವರ ಪ್ರಕಟಿತ ಕಥಾಸಂಕಲನ.